‘ಯಾಕೆ? ಮರ್ಯಾದೆ ಪ್ರಶ್ನೆ?’

‘ಒಂದು ರೀತೀಲಿ ಹಾಗೇ ಅಂದ್ಕೋಬೇಕು. ಅವನು ಎಲ್ಲಿದ್ದಾನೆ ಅನ್ನೋದು ಅವನ ತಾಯಿಗೂ ಗೊತ್ತು, ಹೆಂಡತಿಗೂ ಗೊತ್ತು. ಇವರ ಹತ್ತಿರಕ್ಕೆ ವಾಪಸ್ ಬರೋಲ್ಲ ಅನ್ನೋದು ತಿಳಿದ ಮೇಲೆ ಏನು ಮಾಡೋಕ್ಕಾಗುತ್ತೆ? ಸುಮ್ಮನಾದರು.’

ಅರೆ ಇದೇನು? ಹೊಸ ತಿರುವು ಅನ್ನಿಸಿತು.

‘ಅಕ್ಕಾ, ಯಾವುದಕ್ಕೂ ಕಮ್ಮಿ ಇಲ್ಲ ನಿಜ, ಆದರೆ ಊಟ ಇದ್ರೂ ಉಪವಾಸ ಇರೋಕ್ಕೆ ಅವನಿಗೇನು ಕರ್ಮ? ಮದುವೆ ಆದ್ಮೇಲೆ ಮಕ್ಕಳ ಆಸೆ ಯಾರಿಗಿರೋಲ್ಲ ಹೇಳಕ್ಕ? ಎರಡು ಬಾರಿ ಮೈ ಇಳಿಸಿಕೊಂಡಿದ್ದಾಳೆ ಆ ಸೊಸೆ. ಅವಳಿಗೆ ಮಕ್ಕಳು ಹೆರೋದು ಬೇಡವಂತೆ. ಇವರಿಬ್ಬರ ಜಗಳದಲ್ಲಿ ಆ ತಾಯಿ ಏನು ಮಾಡಿಯಾಳು? ನೋಡುವಷ್ಟು ನೋಡಿ, ಇನ್ನೊಂದು ಸಂಬಂಧ ಬೆಳೆಸಿಕೊಂಡ,

